ವಿಜಯಮ್ಮನವರಲ್ಲಿ ಹೊಯ್ದಾಟ ಎದ್ದು ಕಾಣುತ್ತಿತ್ತು.

'ಮನೆ ತಲುಪಿದ ಮೇಲೆ ಮಾತನಾಡೋಣ..ಈಗ ಬಾಯ್ಮುಚ್ಕೊಂಡು ಕೂತ್ಕೋ..ನನ್ನ ತಾಳ್ಮೆಯನ್ನು ನೀನು ಪರೀಕ್ಷಿಸಬೇಡ..' ಪ್ರಭಾಕರರಾಯರ ಬಿರುನುಡಿಗೆ ವಿಜಯಮ್ಮ ಮೌನ ತಳೆದರಾದರೂ ಅವರು ತಮ್ಮ ತಳಮಳವನ್ನು ನಿಗ್ರಹಿಸುವ ವ್ಯರ್ಥ ಪ್ರಯತ್ನ ಮಾಡುತ್ತಿದ್ದರು. ಅಪೂರ್ವ ಬರೀ ಮೂಕ ಪ್ರೇಕ್ಷಕಿಯಾಗಿದ್ದಳು. ಮನೆ ತಲುಪಿದೊಡನೆ, ಪ್ರಭಾಕರರಾಯರು ವಿಜಯಮ್ಮನನ್ನು ಕರೆದೊಯ್ದು ಕೋಣೆ ಸೇರಿ ಬಾಗಿಲು ಹಾಕಿಕೊಂಡರು. ಒಳಗಿನ ಮಾತುಕತೆ ಆಲಿಸುವುದು ಸಭ್ಯತೆಯಲ್ಲವೆಂದುಕೊಂಡು ಅಪೂರ್ವ ತನ್ನ ಕೋಣೆ ಸೇರಿಕೊಂಡಳು.

ಆ ಯುವಕನ ಬಗ್ಗೆ ವಿಜಯಮ್ಮನಿಗೆ ಅಂಥ ಸೆಳೆತವೇಕಿತ್ತು..? ಆತ ಈ ಮನೆಯಲ್ಲಿ ಇಂಥ ಬಿರುಗಾಳಿ ಎಬ್ಬಿಸಬೇಕಾದರೆ ಆತ ಯಾರೋ 'ಪ್ರಭಾವಿ' ವ್ಯಕ್ತಿಯಾಗಿರಬೇಕು..! ಪ್ರಮುಖನಾಗಿರಬೇಕು.! ದೇವಸ್ಥಾನದ ಬಳಿ ಕುಳಿತು ಭಿಕ್ಷೆ ಬೇಡುವ ಭಿಕ್ಷುಕನಿಗೂ ಈ ಮನೆಯವರಿಗೂ ಏನು ಸಂಬಂಧ..? ತನ್ನೆದುರು ಆ ಯುವಕನ ಹಿನ್ನೆಲೆಯನ್ನು ಪ್ರಸ್ತಾಪಿಸಲು ಇಬ್ಬರೂ ಹಿಂಜರಿದದ್ದು, ನಿರಾಕರಿಸಲು ಕಾರಣವೇನು..? ತಾನು ಹೊರಗಿನವಳೆಂಬ ತಾತ್ಸಾರವೇ? ಅಥವಾ ತನ್ನೆದುರು ಮಾತನಾಡಲು ಮುಜುಗರವೇ..?

ವಿಜಯಮ್ಮ ಕೋಣೆಯಿಂದ ಹೊರಗೆ ಬರಲಿಲ್ಲ. ಪ್ರಭಾಕರರಾಯರು ಟಿ.ವಿ. ಮುಂದೆ ಕುಳಿತರೂ ಅವರು ವಿಚಲಿತರಾಗಿದ್ದಂತೆ ಕಂಡು ಬಂದರು. ಅವರಿಬ್ಬರ ಚಿತ್ತ ಕದಡಿರುವುದು ಅಪೂರ್ವಳಿಗೆ ಸ್ಪಷ್ಟವಾಗಿತ್ತು. ಆ ಯುವಕನ ದರ್ಶನ, ಪ್ರಶಾಂತ ಕೊಳದ ನೀರಿನಂತಿದ್ದ ಆ ಮನೆಯ ವಾತಾವರಣಕ್ಕೆ ಕಲ್ಲೆಸೆದಂತಾಗಿ ಕಲಕಿ ಹೋಗಿತ್ತು. ರಾತ್ರೆ, ಅಪೂರ್ವಳಿಗೆ ಕಣ್ಣಿಗೆ ನಿದ್ದೆ ಸುಳಿಯದಂತಾಗಿತ್ತು. ಅವಳು ಎದ್ದು ವಿಜಯಮ್ಮನನ್ನು ವಿಚಾರಿಸಲು ಮನಸ್ಸಾದರೂ, ರಾಯರ ಮುಂದೆ ಅಂಥ ಪ್ರಯತ್ನ ಮಾಡುವ ಸಾಹಸ ಅವಳಿಂದಾಗಿರಲಿಲ್ಲ. ಆ ಯುವಕ ಮತ್ತು ಇವರ ನಡುವಿನ ಪರಿಚಯದ ನಾನಾ ಸಾಧ್ಯತೆಗಳನ್ನು ಅವಳು ಊಹಿಸಿಕೊಳ್ಳುತ್ತಿರುವಾಗಲೇ ವಿಜಯಮ್ಮ ಸದ್ದು ಮಾಡದೇ ಅವಳ ಮುಂದೆ ಬಂದು ನಿಂತಿದ್ದರು.

'ಅಪೂರ್ವ..ನನಗೆ ನಿನ್ನಿಂದ ಒಂದು ಉಪಕಾರವಾಗಬೇಕಲ್ಲಾ..ಕಂದಾ..'

ಅಪೂರ್ವ ತಡಬಡಿಸಿ ಎದ್ದು ನಿಂತು, 'ಏನು ಬೇಕು ಆಂಟಿ..? ನನ್ನಿಂದ ಉಪಕಾರವೇ..? ಅಂಥ ಯೋಗ್ಯತೆ ನನಗೆಲ್ಲಿದೆ..?'

'ಹಾಗಲ್ಲ ಅಪೂರ್ವ.. ಇವತ್ತು ಹೋಗಿದ್ವಲ್ಲಾ..ಆ ದೇವಸ್ಥಾನ.. ಅಲ್ಲಿಗೆ ನಾಳೆ ಬೆಳಿಗ್ಗೆ ನನ್ನನು ಕರ್ಕೊಂಡು ಹೋಗ್ತೀಯಾ..?' ಅವರ ಬಿನ್ನಹದ ಹಿಂದಿನ ಕಾರಣ ಅಪೂರ್ವಳಿಗೆ ಹೊಳೆದಿತ್ತು.

'ಆಯ್ತು..ಖಂಡಿತಾ ಕರ್ಕೊಂಡು ಹೋಗ್ತೀನಿ..'

'ಆದ್ರೆ..' ಎಂದವರು ಕ್ಷಣ ತಡೆದು, 'ನಿನ್ನ ಅಂಕಲ್‌ಗೆ ಈ ವಿಷಯ ಗೊತ್ತಾಗಬಾರದು..ನೀನು..ಬೆಳಿಗ್ಗೆ ಕಾಲೇಜಿಗೆ ಹೊರಡುವ ಹಾಗೇ ಹೊರಡು.. ಬಸ್‌ಸ್ಟಾಪ್‌ನಲ್ಲಿ ನಿಲ್ಲು..ನಾನು ಹೊರಟು ಬರ್ತೀನಿ..ಸರೀನಾ..?' ಎಂದಾಗ ಅಪೂರ್ವ ಗೋಣಾಡಿಸಿದಳು.

'ಅವ್ನು ಅಲ್ಲಿದ್ರೆ ಸಾಕಪ್ಪಾ..! ಲಕ್ಷ್ಮೀ ನರಸಿಂಹಾ..'ಎಂದು ಭಗವಂತನನ್ನು ಸ್ಮರಿಸಿ ಕೈ ಮುಗಿದಾಗ ಅಪೂರ್ವಳಿಗೆ ತಡೆಯಲಾಗಲಿಲ್ಲ.

'ಆಂಟಿ..ನೀವು ಆ ಭಿಕ್ಷುಕನನ್ನು ನೋಡಲು ತಾನೇ ಹೋಗ್ತಿರೋದು..?'

ವಿಜಯಮ್ಮ ಮುಖ ಕಿವುಚಿ, 'ಹಾಗೆಲ್ಲಾ ಅನ್ಬೇಡ್ವೇ..ಅಪೂರ್ವ..ನನಗೆ ಸಂಕಟವಾಗುತ್ತೆ..!' ವಿಜಯಮ್ಮನ ದನಿ ಗದ್ಗದಗೊಂಡಿತು.

'ಯಾಕೆ ಆಂಟಿ..? ಆತ ಯಾರು..? ಅಂಕಲ್ ಅವನನ್ನು ಗುರುತಿಸಲೇ ನಿರಾಕರಿಸುತ್ತಾರೆ..ನೀವು ನೋಡಿದ್ರೆ ಈ ರೀತಿ ಪರಿತಪಿಸುತ್ತಿದ್ದೀರಾ..ಆ ಯುವಕನ ಅವಸ್ಥೆ ನೋಡಿದ್ರೆ ತುಂಬಾ ಹೀನವಾಗಿದೆ.. ತೀರಾ ಕನಿಕರವಾಗುತ್ತೆ..ಯಾಕೆ ಹೀಗೆ..? ಆತನಿಗೂ ನಿಮಗೂ ..ಏನು ಸಂಬಂಧ..? ಅಷ್ಟಕ್ಕೂ ಅವನು ಯಾರು..?'

ಅಪೂರ್ವಳ ಪ್ರಶ್ನೆಗೆ ವಿಜಯಮ್ಮ ಕೈ ಹೊಸೆದುಕೊಳ್ಳುತ್ತ, 'ನಾನು ಏನೂ ಹೇಳುವ ಸ್ಥಿತಿಯಲ್ಲಿಲ್ಲಮ್ಮಾ..ದಯವಿಟ್ಟು ನನ್ನ ಏನೂ ಕೇಳ್ಬೇಡಾ..!' ಎಂದವರೇ ಅವಳ ಕೋಣೆಯಿಂದ ನಿರ್ಗಮಿಸಿದರೆ, ಅಪೂರ್ವಳ ಮನದಲ್ಲಿ ಕೊರೆಯುತ್ತಿದ್ದ ಪ್ರಶ್ನೆಗಳಿಗೆ ಉತ್ತರ ದೊರಕದೇ ಹಾಗೇ ಉಳಿದುಕೊಂಡವು.

* * *

ಮರುದಿನ ಬೆಳಿಗ್ಗೆ ಅಪೂರ್ವ ಏಳುವ ಹೊತ್ತಿಗೇ ವಿಜಯಮ್ಮನವರು ಎಲ್ಲಾ ಕೆಲಸಗಳನ್ನು ಮುಗಿಸಿ ಸಿದ್ಧರಾಗಿ ನಿಂತಿದ್ದರು. ಆ ಯುವಕನನ್ನು ಕಾಣುವ ಕಾತರ ಅವರಲ್ಲಿ ಎದ್ದು ಕಾಣುತ್ತಿತ್ತು. ಅವರ ಆಣತಿಯಂತೆ ಅಪೂರ್ವ ಉಪಾಹಾರ ಮುಗಿಸಿ ಕಾಲೇಜಿಗೆ ಹೋಗಲು ಅಣಿಯಾದವಳಂತೆ ಹೊರಟು ಬಸ್ ಸ್ಟಾಪಿನಲ್ಲಿ ಕಾಯುತ್ತ ನಿಂತಿರುವಂತೇ, ವಿಜಯಮ್ಮ ಸ್ವಲ್ಪ ಹೊತ್ತಿನಲ್ಲಿ ಹೊರಟು ಬಂದಿದ್ದರು. ಇಬ್ಬರೂ ಆಟೋ ಹಿಡಿದು ಲಕ್ಷ್ಮೀನರಸಿಂಹಸ್ವಾಮಿ ದೇವಾಲಯದ ಮುಂದೆ ಬಂದಿಳಿದಾಗ, ಹಿಂದಿನ ದಿನ ಭಿಕ್ಷುಕರು ಕುಳಿತಿದ್ದ ಮೆಟ್ಟಿಲುಗಳು ಇಂದು ಖಾಲಿಯಾಗಿದ್ದವು. ವಿಜಯಮ್ಮನ ಮುಖದಲ್ಲಿದ್ದ ಉದ್ವೇಗ ಮರೆಯಾಗಿ ನಿರಾಶೆ ದಟ್ಟವಾಗಿ ಮೂಡಿತು,'ಇವತ್ತು ಯಾರೂ ಕಾಣ್ತಾನೇ ಇಲ್ವಲ್ಲೇ..ನಿನ್ನೆನೇ ಅವನನ್ನು ಮಾತನಾಡಿಸಬೇಕಿತ್ತು..!' ಎಂದು ಮಮ್ಮಲ ಮರುಗಿದರು.

ಆದರೆ, ಈ ಸಲ ಅಪೂರ್ವ 'ಅವನು' ಯಾರೆಂದು ಕೇಳಲು ಹೋಗಲಿಲ್ಲ. ಅದಕ್ಕೆ ಉತ್ತರವನ್ನು ತಾನು ಕೇಳಿದರೂ ದೊರಕದೆಂಬ ಸತ್ಯ ಅವಳಿಗೆ ಮನದಟ್ಟಾಗಿತ್ತು.

ವಿಜಯಮ್ಮ,'ಒಳಗಡೆ ಭಟ್ಟರನ್ನು ಮಾತನಾಡಿಸಿಕೊಂಡು ಬರೋಣ ನಡೀ..' ಎಂದು ಆತುರದಿಂದ ಮೆಟ್ಟಿಲುಗಳನ್ನೇರ ತೊಡಗಿದರು. ಅಪೂರ್ವಳಿಗೆ ಅವರ ಹುರುಪಿನ ವೇಗಕ್ಕೆ ಹಿಂಬಾಲಿಸಿಸಲು ಪ್ರಯಾಸ ಪಡಬೇಕಾಯಿತು.

ಒಳ ಬಂದು ಪುರೋಹಿತರಿಂದ ತೀರ್ಥ, ಪ್ರಸಾದ ಸ್ವೀಕರಿಸಿದ ಬಳಿಕ ವಿಜಯಮ್ಮ, ಭಟ್ಟರಿಗೆ ಮಾತ್ರ ಆಲಿಸುವಂತೆ ತಗ್ಗಿದ ದನಿಯಲ್ಲಿ ವಿಚಾರಿಸಿದರು,'ಭಟ್ರೇ..ದೇವಸ್ಥಾನದ ಹೊರಗಿನ ಮೆಟ್ಟಿಲುಗಳ ಬಳಿಯಲ್ಲಿ ಜನ ಕೂತಿರ್ತಾರಲ್ವಾ..ಅವ್ರೆಲ್ಲಾ ನಿತ್ಯ ಬರ್ತಾರಾ..?'

'ಭಿಕ್ಷೆ ಬೇಡೋರೇನು..?' ಭಟ್ಟರು ಪ್ರಶ್ನಿಸಿದಾಗ ವಿಜಯಮ್ಮನಿಗೆ ತಮ್ಮ ಗಂಟಲಲ್ಲಿ ಏನೋ ಸಿಲುಕಿಕೊಂಡಾಂತೆ ತಳಮಳಿಸಿದರು. ಹೌದೆನ್ನುವಂತೆ ತಲೆಯಾಡಿಸಿದರು.

'ಅವ್ರು ಮಂಗಳವಾರ ಈ ದೇವಸ್ಥಾನ, ಬುಧವಾರ ಗಣಪತಿ ದೇವಸ್ಥಾನ, ಗುರುವಾರ ರಾಯರ ಮಠ, ಶುಕ್ರವಾರ ಅಮ್ಮನವರ ದೇವಸ್ಥಾನ, ಶನಿವಾರ ಈಶ್ವರ ದೇವಸ್ಥಾನ.. ಹೀಗೆ ಜನ ಎಲ್ಲಿ ಜಾಸ್ತಿ ಸೇರ್ತಾರೋ..ಅಲ್ಲಿರ್ತಾರೆ ನೋಡಿ..ಅವ್ರಿಗೂ ಕಲೆಕ್ಷನ್ ಆಗ್ಬೇಕಲ್ವಾ..? ನೀವು ನಿನ್ನೆ ಬಂದಿದ್ರಲ್ವಾ..ಇವತ್ತು ಬೆಳಿಗ್ಗೇನೇ ಪುನಃ ಹೇಗೆ ಬರೋಣವಾಯ್ತು..ನಿಮ್ಮ ವಸ್ತು ಏನಾದ್ರೂ ಕಳೆದು ಹೋಗಿದ್ಯಾ..?'

ವಿಜಯಮ್ಮ ಭಾರವಾದ ದನಿಯಲ್ಲಿ, 'ಹೌದು..ಭಟ್ರೆ..ಕಳೆದು ಹೋಗಿದೆ..ಅದನ್ನೇ ಹುಡುಕಿಕೊಂಡು ಬಂದೆ..' ಅವರ ಒಗಟಿನ ಉತ್ತರ ಅಪೂರ್ವಳಿಗೆ ಅರ್ಥವಾಗಿತ್ತು.

'ಹಣನೋ..ಚಿನ್ನಾನೋ..? ಒಂದ್ಸಲ ಕಳೆದು ಹೋದ್ರೆ ಅವ್ರು ಕೊಡ್ತಾರಾ ಹೇಳಿ..? ಇರಿ..ನಿಮ್ಮ ವಸ್ತು ಆದಷ್ಟು ಬೇಗ ಸಿಗಲೀಂತ ಪ್ರಾರ್ಥನೆ ಮಾಡಿ ಪ್ರಸಾದ ಕೊಡ್ತೀನಿ..' ಎಂದವರು, ದೇವರ ನಡೆಯಲ್ಲಿ ನಿಂತು ಪ್ರಾರ್ಥಿಸಿ ಗಂಧ, ಹೂ ನೀಡಿದರು.

ವಿಜಯಮ್ಮ ಭಕ್ತಿಯಿಂದ ಅದನ್ನು ಕಣ್ಣಿಗೊತ್ತಿಕೊಂಡು, ಅವರಿಗೆ ವಂದಿಸಿ ಭಾರವಾದ ಹೆಜ್ಜೆಗಳನ್ನಿರಿಸುತ್ತ ಹೊರ ಬಂದರು. ಅಷ್ಟೊಂದು ಆಸೆ ಹೊತ್ತು ಬಂದೂ ಸಹ ಆತನನ್ನು ನೋಡಲಾಗದೇ ಹೋದೆನಲ್ಲ ಎಂದು ಪರಿತಪಿಸಿದರು.

'ನನ್ನನ್ನು ಮನೆಗೆ ಬಿಟ್ಟು ಕಾಲೇಜಿಗೆ ಹೋಗು ಅಪೂರ್ವ.. ನನ್ನ ಕಾರಣದಿಂದ ನಿನ್ನೆ ಥರ , ಇವತ್ತೂ ಮೊದಲ ಪೀರಿಯೆಡ್ಡು ನಿನಗೆ ತಪ್ಪಿತು..' ಮಿಡುಕುತ್ತ ನುಡಿದರು. ವಿಜಯಮ್ಮನ ಮುಖದಂತೆ ಅವರ ದನಿಯೂ ಇಳಿದು ಹೋಗಿತ್ತು. ಅವರಿಗೆ ಭ್ರಮನಿರಸನವಾಗಿದ್ದು ಅವರ ನಡೆನುಡಿಯಲ್ಲಿದ್ದ ಖಿನ್ನತೆ ಎದ್ದು ತೋರಿಸುತ್ತಿತ್ತು. ಬಂದ ಖಾಲಿ ಆಟೋವನ್ನು ಏರಿ ಇಬ್ಬರೂ ಮನೆ ತಲುಪಿದರು. ಪ್ರಭಾಕರರಾಯರು ಹೊರ ಬಾಗಿಲಲ್ಲೇ ಇವರಿಗಾಗಿಯೇ ಕಾಯುತ್ತ ನಿಂತಿರುವಂತೆ ಕಂಡು ಬಂದರು, 'ಆಯ್ತಾ..ದೇವರ ದರ್ಶನ..? ಅವ್ನು ಸಿಗ್ಲಿಲ್ಲ ತಾನೇ..?'

ಅವರ ಪ್ರಶ್ನೆಗೆ ಉತ್ತರಿಸುವ ಗೋಜಿಗೆ ಹೋಗದೇ ವಿಜಯಮ್ಮ ಮುನ್ನಡೆದರೆ, ಅಪೂರ್ವ ಅಲ್ಲಿಂದಲೇ ಕಾಲೇಜಿಗೆ ಹೊರಟಳು.

ಹಿಂದಿನ ದಿನ ದೇವಾಲಯದಲ್ಲಿ ಆತನನ್ನು ನೋಡಿದ ಬಳಿಕ, ಮನೆಯಲ್ಲಿ ರಾಯರು ವಿಜಯಮ್ಮನ ನಡುವೆ ಎದ್ದ ಬಿರುಗಾಳಿ ಅವಳರಿವಿಗೆ ಬಂದಿತ್ತು. ವಿಜಯಮ್ಮ ಆತನನ್ನು ಹುಡುಕಿಕೊಂಡು ದೇವಸ್ಥಾನಕ್ಕೆ ಬಂದಿದ್ದು, ರಾಯರಿಗೆ ವಿಜಯಮ್ಮನ ವರ್ತನೆ ಹಿಡಿಸದಿರುವುದು ...ಆ ವ್ಯಕ್ತಿ ಇವರ ಜೀವನದಲ್ಲಿ